ಒಳಗಿಟ್ಟರೆ ಮತ್ತೆ ತೆಗೆದು ಬಾಯಿಗಿಟ್ಟರು. ಒಂದೆರೆಡು ನಿಮಿಷಗಳ ಬಳಿಕ ಬಿಕ್ಕುತ್ತ, "ನಾ ನನ್ನ ಪ್ರೀತಿ ಹೆಂಡ್ತಿಗೆ... ನಿನ್ನ ಕಾಕೂಗ ಮೋಸಾ ಮಾಡಿಬಿಟ್ಟೆ ಪಾಂಡೂ..." ಎಂದು ಅತ್ತರು. ಒಂದು ಕ್ಷಣ ಆಶ್ಚರ್ಯವಾದರೂ ಆವೇಶದಲ್ಲಿ, ದುಃಖದ ಭರದಲ್ಲೇನೋ ಹೇಳಿರಬಹುದು ಎಂದುಕೊಂಡೆ. ಮನದ ಭಾವನೆಗಳೆಲ್ಲ ಕರಗಿ ನೀರಾಗುವಾಗ ಇದೆಲ್ಲ ಸಹಜ ತಾನೇ. ಅತ್ತು... ಹೇಳಿ ಹಗುರಾಗಲಿ ಎಂದುಕೊಂಡೆ. ಕಾಕಾ ನಿಧಾನವಾಗಿ, "ಅಮೆರಿಕಾದ ಹುಚ್ಚು ಭಾಳಿತ್ತು ಅಕಿಗೆ..." ಎಂದದ್ದೇ ಸುಮ್ಮನಾದರು.

ಅದು ನಿಜವಿತ್ತು ಕೂಡ. ವಿದೇಶದ ವ್ಯಾಮೋಹ ತುಸು ಹೆಚ್ಚೇ ಅವರಿಗೆ ಅಂಟಿಕೊಂಡಿತ್ತು. ಅಜಯನಿಗಿಂತ ಮೊದಲು ನಾನು ಜರ್ಮನಿಗೆ ಹೋದಾಗ ಕಾಕು ಒದ್ದಾಡಿಬಿಟ್ಟಿದ್ದರು. ನಂತರ ಅಜಯ ಅಮೆರಿಕಕ್ಕೆ ಹೋದಾಗಲೇ ಸಮಾಧಾನವಾಗಿದ್ದು. ತಾವೂ ಅಮೆರಿಕಾ ಸುತ್ತಿ ನಯಾಗರಾ ನೋಡಿ ಬಂದು ಅದರ ವರ್ಣನೆ ಮಾಡಿದಾಗಲೇ ಅವರು ತಣ್ಣಗಾಗಿದ್ದು. ನಾನು ಲಂಡನ್ನಿಗೆ ಪ್ರೊಜೆಕ್ಟ್ ವರ್ಕಿಗೆ ಹೋದಾಗ ಅವ್ವ ಅಪ್ಪನನ್ನೂ ಕರೆದೊಯ್ದಿದ್ದೆ. 'ಬೇಡ'ವೆಂದು ಅಂಗಲಾಚಿದವರನ್ನು ಬಿಡದೇ, "ಎಷ್ಟೋ ಮಂದಿ ವಿದೇಶಕ್ಕ ಹೋಗ್ಲಿಕ್ಕೆ ತುದಿಗಾಲ ಮ್ಯಾಲೆ ನಿಂತಿರತಾರ. ನೀವು ಬ್ಯಾಡ ಅಂತೀರಿ..." ಎಂದು ಜೋರು ಮಾಡಿ ಪಾಸ್‌ಪೋರ್ಟ್, ವೀಸಾ ರೆಡಿ ಮಾಡಿಸಿಕೊಂಡು ಜೊತೆಯಲ್ಲೇ ಕರೆದೊಯ್ದೆ. ಇಬ್ಬರೂ ಹೆದರಿದ್ದರು. ಹಗಲಿನಲ್ಲಿ ಎಂದೂ ಅಪ್ಪನ ಹತ್ತಿರ ಕೂಡ ಸುಳಿಯದ ಅವ್ವ ಗಟ್ಟಿಯಾಗಿ ಅವನ ಕೈಹಿಡಿದಿದ್ದಳು. ವಿಮಾನದಲ್ಲೂ ಇಬ್ಬರೂ ಬೆರಗಾಗಿ ಸೀಟಿಗೆ ಅಂಟಿಕೊಂಡೇ ಕುಳಿತಿದ್ದರು. ನಾನು ಆಫೀಸಿಗೆ ಹೋದ ಮೇಲೂ ಮನೆಯಲ್ಲಿ ಇಬ್ಬರೇ. ಸಂಜೆ ನಾನು ಬರುವವರೆಗೂ ಬಾಗಿಲು ತೆರೆಯದೇ ಕಾಯುತ್ತಿದ್ದರು. ಒಮ್ಮೆ ಎದುರು ಮನೆಯಾಕೆ ಬಂದು ಬೆಲ್ ಮಾಡಿದ್ದಾಳೆ. ಹೆದರುತ್ತಲೇ ಅಪ್ಪ ಬಾಗಿಲು ತೆರೆದಿದ್ದಾರೆ. ಅವರಿಗೆ ಇಂಗ್ಲಿಷ್ ತುಂಬಾ ದುಬಾರಿ. ಅವ್ವನಿಗಂತೂ ಸೊನ್ನೆ. ಅವಳು, "ಯಾವುದೋ ನಾಯಿ ನಿಮ್ಮ ಮನೆ ಎದುರಿನಲ್ಲಿ ಗಲೀಜು ಮಾಡಿದೆ. ಜಾಗ್ರತೆಯಾಗಿ ಓಡಾಡಿ" ಎಂದು ಹೇಳಿದ್ದಾಳೆ. ಅಪ್ಪನಿಗೆ ಏನೂ ಅರ್ಥವಾಗದೇ ಪಾಸ್‌ಪೋರ್ಟ್ ತಂದು ಅವಳೆದುರು ಹಿಡಿದಿದ್ದಾನೆ. ಅವಳು ಬೇಡವೆಂದು ತಲೆಯಾಡಿಸಿದಾಗ ಗಡಗಡ ನಡಗುತ್ತ ನನ್ನ ಫೋನ್ ನಂಬರ್ ಕೊಟ್ಟಿದ್ದಾನೆ. ಅವಳು ಫೋನ್ ಮಾಡಿ ವಿಷಯ ತಿಳಿಸಿದಾಗ ನನಗೆ ನಗು ಬಂದಿತ್ತು. ಅವರಿಬ್ಬರಿಗೂ ಅದನ್ನು ತಿಳಿಸಿ ಹೇಳಿದಾಗ, "ಅಯ್ಯ... ಇಷ್ಟನ..." ಎಂದಿದ್ದರು. ನಮ್ಮ ಹಳ್ಳಿಯಲ್ಲಿ ಇದು ಮಾಮೂಲೆಂದು ಅವಳಿಗೇನು ಗೊತ್ತು? ಕಾಕು ಅಮೆರಿಕದ ವಿಷಯ ಹೇಳುತ್ತ 'ಅಜಯ ಆಫೀಸಿಗೆ ಹೋದ ಮೇಲೆ ನಾವಿಬ್ಬರೂ ಹೋಗಿ ಓಡಾಡಿ ಬರತಿದ್ವಿ' ಎಂದು ಹೇಳಿದಾಗ ಮಾತಿಗೆ ಮಾತು ಬಂದು ನಾನೂ ಈ ವಿಷಯ ಹೇಳಿದೆ. ಕಾಕು ಹೊಟ್ಟೆ ಹಿಡಿದುಕೊಂಡು ನಗುವಾಗ ಹೇಳಬಾರದಿತ್ತು ಎನ್ನಿಸಿದ್ದು ಸುಳ್ಳಲ್ಲ.

ಒಮ್ಮೆ ನಿಟ್ಟುಸಿರು ಬಿಟ್ಟು ಕಾಕಾ ಮುಂದುವರೆಸಿದರು. "ಅರ್ಲಿಂಗ್ಟನ್‌ನ್ಯಾಗ ಏನಾತು ಗೊತ್ತೇನ? ಅಜಯನ ಕೊಲೀಗ್ ಗ್ರೇಸಿ ಅಂತ ಹೊಸದಾಗಿ ಸೇರ್ಕೊಂಡಿದ್ಲಂತ. ಕೆಲಸ ಬರ್ತಿದ್ದಿಲ್ಲಂತ. ಕಲಿಯೋ ಮನಸೂ ಇರಲಿಲ್ಲ. ಇಂವಾ ಅಕಿಗೆ ಕಲಸ್ಲಿಕ್ಕೆ ಪ್ರಯತ್ನ ಮಾಡ್ಯಾನ. ಮಾತಿನ ಭರದಾಗ ಅಕಿ ಹೆಗಲ ಮ್ಯಾಲೆ ಕೈ ಇಟ್ಟಾನ. ತೊಡಿ ತಟ್ಯಾನ. ಸ್ವಲ್ಪ ಸಲಿಗೀಲೆ ನಡಕೊಂಡದ್ದೆಲ್ಲಾ ಸಿ.ಸಿ. ಟೀವಿಯೊಳಗ ರೆಕಾರ್ಡ್ ಆಗೇದ. ಅಕಿ ಕೆಲಸ ಥೊಲೊ ಮಾಡಿಲ್ಲಂತ ಇಂವಾ ಥೊಲೊ ಅಪ್ರೇಸಲ್ ಕೊಟ್ಟಿಲ್ಲಾ. ಹೈಕ್ ಕೊಟ್ಟಿಲ್ಲಂತ ಅಕಿ ಝುಗಳ್ಯಾಡಿದ್ಲಂತ. ಇಂವನೂ ಬಿಡ್ಲಿಲ್ಲ. ನಾಕು ಮಾತಾಡ್ಯಾನ. ಅದು ಮ್ಯಾಲಿನಾವ್ರ ತನಕಾ ಹೋಗೇದ. ಅಕಿ 'ನಿನ್ನ